## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ಶೂನ್ಯವೇಳೆಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ

**ವಿಷಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ (ಹಾಲಿ ಜಿಬಿಎ) ಮೈಸೂರು ಬ್ಯಾಂಕ್ ಬಳಿ ಕೆಂಪೇಗೌಡ ರಸ್ತೆಯಲ್ಲಿರುವ ಆಸ್ತಿ ಸಂಖ್ಯೆ: 8 ರ ಪ್ರಭಾತ್ ಕಾಂಪ್ಲೆಕ್ಸ್ ಒಂದು ವಾಣಿಜ್ಯ ಮಳಿಗೆಯಾಗಿದ್ದು, ಸದರಿ ಕಾಂಪ್ಲೆಕ್ಸ್ ನಲ್ಲಿ ಹಲವಾರು ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು, ಇದೇ ಕಾಂಪ್ಲೆಕ್ಸ್ ನಲ್ಲಿ ಹಲವಾರು ವಕೀಲರೂ ತಮ್ಮ ಕಛೇರಿಗಳನ್ನು ಹೊಂದಿರುತ್ತಾರೆ. ನಿಯಮಾನುಸಾರ ಸದರಿ ಕಟ್ಟಡದಲ್ಲಿ ಕಟ್ಟಡ ನಿರ್ವಹಣೆಗೆ ಮಿಸ್ ಪಿ.ಸಿ.ಕೋ ಓನರ್ಸ್ ಅಸೋಸಿಯೇಷನ್ ಸಂಸ್ಥೆಯನ್ನು ರಚಿಸಿಕೊಂಡಿದ್ದು, ಸ್ಥಳೀಯ ಸಂಸ್ಥೆ ಮತ್ತು ಪೊಲೀಸ್ ಸೂಚನೆಗಳಿಗೆ ಅನುಗುಣವಾಗಿ ಸಿಸಿಟಿವಿ ಕ್ಯಾಮೆರ ಮತ್ತು ಇತರೆ ನಿರ್ವಹಣೆಯನ್ನು ಈ ಅಸೋಸಿಯೇಷನ್ ಮೂಲಕ ಮಾಡಲಾಗುತ್ತಿದೆ. ಈ ವಾಣಿಜ್ಯ ಕಟ್ಟಡದಲ್ಲಿ ಎಂ.ಎನ್. ಮೋಹನ್ ಎಂಬುವ ವ್ಯಕ್ತಿ ನೆಲಮಾಳಿಗೆಯಲ್ಲಿ ಕಾನೂನು ಬಾಹಿರವಾಗಿ ಒಂದು ಕಟ್ಟಡದಲ್ಲಿ ಅನುಮತಿ ಪಡೆಯದೇ ಹೋಟೆಲ್ ಮತ್ತು ಬಾರ್ ನಡೆಸುತ್ತಿರುವ ಆರೋಪಗಳಿರುತ್ತದೆ. ಇದೇ ವ್ಯಕ್ತಿ ಕಾನೂನು ಬಾಹಿರವಾಗಿ ಕೆಲವು ವ್ಯಕ್ತಿಗಳಿಗೆ ಪಾರ್ಕಿಂಗ್ ಜಾಗದಲ್ಲಿ ಅಸೋಸಿಯೇಷನ್ ಸ್ಥಳವನ್ನು ಬಾಡಿಗೆಗೆ ನೀಡಿ ಬಾಡಿಗೆ ವಸೂಲು ಮಾಡುತ್ತಿದ್ದಾರೆ. ಇದೇ ಕಟ್ಟಡದಲ್ಲಿ ಮುಖ್ಯರಸ್ತೆಗೆ ಹೊಂದುಕೊಂಡಂತೆ ಕೆಲವರು ನಕಲಿ ವಾಚ್ / ಗಡಿಯಾರಗಳನ್ನು ಮತ್ತು ಸಿಂಧು ಎನ್ನುವವರು ನಕಲಿ ಬ್ರ್ಯಾಂಡ್ ಬಟ್ಟೆಗಳನ್ನು ಮಾರಾಟ ಮಾಡುತ್ತಿದ್ದು, ಪೊಲೀಸರ ಗಮನಕ್ಕೆ ಬಂದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ಕಟ್ಟಡದಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಕ್ರಮಗಳನ್ನು ನಿಲ್ಲಿಸದೇ ಹೋದರೆ ಕಾನೂನು ಸುವ್ಯವಸ್ಥೆಯ ಸಮಸ್ಯೆ ಉಂಟಾಗುತ್ತದೆ. ಕೆಲವು ವ್ಯಕ್ತಿಗಳು ಪ್ರಭಾತ್ ಕಾಂಪ್ಲೆಕ್ಸ್ ವಾಣಿಜ್ಯ ಕಟ್ಟಡದಲ್ಲಿ ಅಕ್ರಮ ಚಟುವಟಿಕೆಗಳನ್ನು ನಡೆಸುತ್ತಿದ್ದು, ಪೊಲೀಸರು ಕೂಡಲೇ ಕ್ರಮ ಕೈಗೊಂಡು ಇದನ್ನು ನಿಯಂತ್ರಿಸಬೇಕಾಗಿರುತ್ತದೆ. ರಾಜ್ಯ ಸರ್ಕಾರದ ಪೊಲೀಸ್ ಇಲಾಖೆಯು ಕೂಡಲೇ ಅಕ್ರಮ ಚಟುವಟಿಕೆಗಳ ಮೇಲೆ ಕ್ರಮ ಕೈಗೊಳ್ಳುವ ವಿಷಯದ ಕುರಿತು.

**ಉತ್ತರ:** ಕೆಂಪೇಗೌಡ ರಸ್ತೆಯಲ್ಲಿರುವ ಆಸ್ತಿ ಸಂಖ್ಯೆ: 08 ಪ್ರಭಾತ್ ಕಾಂಪ್ಲೆಕ್ಸ್, ಬೆಂಗಳೂರು ನಗರ ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಡುತ್ತದೆ. ಈ ಕಟ್ಟಡದಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಯುತ್ತಿದೆ ಎಂದು ಹಾಗೂ ಅದನ್ನು ಪ್ರಶ್ನಿಸಿದಾಗ ಅರ್ಜಿದಾರರಾದ ಶ್ರೀ ರಮೇಶ್ ಬಾಬು ರವರ ಮೇಲೆ ದೈಹಿಕ ಹಲ್ಲೆ, ಬೆದರಿಕೆ ಹಾಕಿದ್ದಾರೆಂದು ದಿನಾಂಕ:11.11.2025ರಂದು ಉಪ್ಪಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಈ ದೂರನ್ನು ಸ್ವೀಕರಿಸಿ, ಠಾಣೆಯಲ್ಲಿ ಎನ್.ಸಿ.ಆರ್ ನಂ-159/2025, ದಿ:11.11.2025 ರಂದು ದಾಖಲು ಮಾಡಿಕೊಂಡಿರುತ್ತದೆ.

ಸದರಿ ದೂರನ್ನು ಪರಿಶೀಲಿಸಿ, ಮಾನ್ಯ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿ, ತನಿಖೆ ನಡೆಸಲು ಅನುಮತಿ ನೀಡುವಂತೆ ಕೋರಿ ಮನವಿ ಮಾಡಲಾಗಿರುತ್ತದೆ. ಗೌರವಾನ್ವಿತ ನ್ಯಾಯಾಲಯವು ಅನುಮತಿ ನೀಡಿದ ನಂತರ ಪ್ರಕರಣ ದಾಖಲು ಮಾಡಿಕೊಂಡು ಎಲ್ಲಾ ಆಯಾಮಗಳಿಂದ ತನಿಖೆ ಕೈಗೊಳ್ಳಲಾಗುವುದು ಹಾಗೂ ಸದರಿ ಸ್ಥಳದಲ್ಲಿ ಕಾನೂನು ಬಾಹಿರ ಚಟುವಟಿಕೆ ತಡೆಗಟ್ಟುವ ನಿಟ್ಟಿನಲ್ಲಿ ಅಪರಾಧ ವಿಭಾಗದ ಹಾಗೂ ಬೀಟ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಿರುತ್ತದೆ. ಸದರಿ ಸ್ಥಳದಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳುತ್ತಿದ್ದು ಹಾಗೂ ಲಭ್ಯವಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸೂಕ್ತ ನಿಗಾ ವಹಿಸಲಾಗಿದೆ.

---

**ಸಂಖ್ಯೆ:ಹೆಚ್‌ಡಿ 578 ಎಸ್‌ಎಸ್‌ಟಿ 2025**

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು.